# ರಾಮಕೃಷ್ಣ-ವಿವೇಕಾನಂದ ಸಾಹಿತ್ಯಕ್ಕೆ ಕುವೆಂಪು ಅವರ ಕೊಡುಗೆ


**ಸ್ವಾಮಿ ವೀರೇಶಾನಂದ**

ಕನ್ನಡದಲ್ಲಿ ರಾಮಕೃಷ್ಣ–ವಿವೇಕಾನಂದ ಸಾಹಿತ್ಯಕ್ಕೆ ಶ್ರೀ ಕುವೆಂಪು ಅವರು ನೀಡಿದ ಕೊಡುಗೆ ಅಸಾಧಾರಣವಾದುದು. ಅವರು ರಚಿಸಿದ ಜೀವನ ಚರಿತ್ರೆಗಳು, ಅನುವಾದಗಳು, ಸ್ವತಂತ್ರ ಕವಿತೆಗಳು ಹಾಗೂ ಅನುವಾದಿತ ಕವಿತೆಗಳು, ಮುನ್ನುಡಿ ಹಾಗೂ ಇತರ ರಚನೆಗಳು ದಿವ್ಯತ್ರಯರ ಜೀವನ, ಉಪದೇಶಗಳಿಗೆ ವ್ಯಾಪಕವಾದ ಓದುಗವರ್ಗವನ್ನು ದೊರಕಿಸಿಕೊಟ್ಟಿವೆ. ಈ ವಿಷಯವನ್ನು ಕುರಿತು ಇಲ್ಲಿ ವಿವರಿಸುವ ಲೇಖಕರು ‘ವಿವೇಕಪ್ರಭ’ದ ಹಿಂದಿನ ಸಂಪಾದಕರು ಹಾಗೂ ಆಂಗ್ಲ ಮಾಸಪತ್ರಿಕೆ ‘ಪ್ರಬುದ್ಧ ಭಾರತ’ದ ಸಂಪಾದಕರಾಗಿದ್ದರು. ಪ್ರಸ್ತುತ ಇವರು ಬೆಂಗಳೂರಿನ ಬಸವನಗುಡಿಯಲ್ಲಿರುವ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

**ಕು**ವೆಂಪು ಅವರು ಮಲೆನಾಡಿನ ಕೋಗಿಲೆ. ಅವರನ್ನು ವಿಶ್ವಮಾನ್ಯ ಕವಿಯಾಗಿಸುವುದರಲ್ಲಿ ಮೈಸೂರಿನ ರಾಮಕೃಷ್ಣ ಆಶ್ರಮದ ಪಾತ್ರ ಬಹಳ ಹಿರಿದು. ಕುವೆಂಪು ಅವರು ಶ್ರೀರಾಮಕೃಷ್ಣರಿಂದಲೇ ತಮ್ಮ ಬಾಳನ್ನು ಬೆಳಗಿಸಿಕೊಂಡವರು. ರಾಮಕೃಷ್ಣ ಮಹಾಸಂಘದ ಯತಿವರೇಣ್ಯರ ಆಶೀರ್ವಾದ ಪಡೆದು, ಅವರ ಮಾರ್ಗದರ್ಶನದ ಜಾಡಿನಲ್ಲಿ ನಡೆದು ತಮ್ಮ ಆಧ್ಯಾತ್ಮಿಕ ಬದುಕನ್ನು ಸುಸಂಪನ್ನವಾಗಿಸಿಕೊಂಡವರು. ತಮ್ಮ ಆ ಆಧ್ಯಾತ್ಮಿಕ ಸಂಪತ್ತಿನಿಂದ ಕವಿತಾಪ್ರತಿಭೆಯ ಮೇರುಶಿಖರಕ್ಕೆ ಏರಿದವರು. ತದನಂತರ, ರಾಮಕೃಷ್ಣ–ವಿವೇಕಾನಂದ ಭಾವದಲ್ಲಿಯೇ ತಮ್ಮ ಕವಿತಾಲಹರಿಯ ಗಂಗಾಪ್ರವಾಹವನ್ನು ಹಲವಾರು ವರ್ಷಗಳ ಕಾಲ ಹರಿಸಿದವರು. ಆ ಮೂಲಕ ಕನ್ನಡ ವಾಙ್ಮಯವನ್ನು ಪುನೀತಗೊಳಿಸಿ, ಕನ್ನಡಕ್ಕೆ ವಿಶ್ವಭಾಷೆಯ ಸ್ಥಾನಮಾನಗಳನ್ನು ತಂದುಕೊಟ್ಟವರು. ಕುವೆಂಪು ತಮಗೆ ತಾವೇ ಹೇಳಿಕೊಂಡಂತೆ, ನೈಜ ಅರ್ಥದಲ್ಲಿ ‘ಶ್ರೀರಾಮಕೃಷ್ಣ ಭಗವದ್‌ಗೋತ್ರ ಸಂಜಾತರು.’

ಕನ್ನಡ ಸಾಹಿತ್ಯವನ್ನು ಸುಪುಷ್ಟಗೊಳಿಸುವಲ್ಲಿ ರಾಮಕೃಷ್ಣ–ವಿವೇಕಾನಂದ ಸಾಹಿತ್ಯದ ಕೊಡುಗೆ ಬಹಳ ಹಿರಿದಾದುದು. ರಾಮಕೃಷ್ಣ ಆಶ್ರಮಗಳು ಕನ್ನಡ ನೆಲದಲ್ಲಿ ಬೇರೂರುವುದಕ್ಕೆ ಮೊದಲೆ, ಈ ಸಾಹಿತ್ಯವನ್ನು ಹುಟ್ಟುಹಾಕಿ, ಪೋಷಿಸಿ, ಬೆಳೆಸಿದವರು ಪ್ರಸಿದ್ಧ ಕನ್ನಡ ಸಾಹಿತಿಗಳೇ. ಅವರಲ್ಲಿ ಕುವೆಂಪು ಅವರ ಪೂಜ್ಯಗುರುಗಳಾದ ಟಿ. ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ ಮುಂತಾದವರು ಅಗ್ರಗಣ್ಯರು. ಮುಂದಿನ ಪೀಳಿಗೆಯ ಕನ್ನಡ ಸಾಹಿತಿಗಳಲ್ಲಿ ರಾಮಕೃಷ್ಣ–ವಿವೇಕಾನಂದ ಸಾಹಿತ್ಯಕ್ಕೆ ಮಹೋನ್ನತ ಕೊಡುಗೆಯನ್ನು ಕೊಟ್ಟವರಲ್ಲಿ ಕುವೆಂಪು ಸರ್ವಶ್ರೇಷ್ಠರಾಗಿದ್ದಾರೆ ಎಂದು ಹೇಳಿದರೆ ಅದು ಅತಿಶಯೋಕ್ತಿಯೇನಲ್ಲ.

ಕುವೆಂಪು ಅವರು ರಾಮಕೃಷ್ಣ ಮಹಾಸಂಘ ಸಂಪ್ರದಾಯದ ಶಿಶು. ತಮ್ಮ ಯೌವನದ ಅಮೂಲ್ಯ ಕಾಲವನ್ನು ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ಅವರು ಕಳೆದರು. ಅದೇ ಸಂದರ್ಭದಲ್ಲಿ ತಮ್ಮ ಮಾರ್ಗದರ್ಶಕರಾದ ಸ್ವಾಮಿ ಸಿದ್ಧೇಶ್ವರಾನಂದಜಿ ಅವರ ಜೊತೆಗೆ ಬೇಲೂರು ಮಠಕ್ಕೆ ಹೋಗಿ, ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಲ್ಲಿ ವಿಶಿಷ್ಟರಾದ ಪೂಜ್ಯ ಸ್ವಾಮಿ ಶಿವಾನಂದಜಿ ಮಹಾರಾಜರಿಂದ ಮಂತ್ರದೀಕ್ಷೆಯನ್ನು ಪಡೆದರು. ತಮ್ಮ ಬೇಲೂರು ಮಠದ ಯಾತ್ರೆಯನ್ನು ಕುವೆಂಪು ತಮ್ಮ ಆತ್ಮಕಥೆಯಾದ ‘ನೆನಪಿನ ದೋಣಿಯಲ್ಲಿ’ ಗ್ರಂಥದಲ್ಲಿ ಸೊಗಸಾಗಿ ವರ್ಣಿಸಿದ್ದಾರೆ. ಅವರು ಕೊಲ್ಕತಾದಲ್ಲಿ ‘ರಾಮಕೃಷ್ಣ ವಚನವೇದ’ದ ಮೂಲ ಕರ್ತೃ ಮಹೇಂದ್ರನಾಥ ಗುಪ್ತರ ದರ್ಶನವನ್ನೂ ಪಡೆದರು. ಅವರ ಮುಂದೆ ಶ್ರೀರಾಮಕೃಷ್ಣರನ್ನು ಕುರಿತು ತಾವು ಬರೆದ ಸುದೀರ್ಘ ಪದ್ಯದ ಭಾಗಗಳನ್ನು ಓದಿ ಹೇಳಿದರು. ಅದನ್ನು ಕೇಳಿ ಸಂತುಷ್ಟರಾದ ಮಾಸ್ಟರ್ ಮಹಾಶಯರು ಈ ಕವಿತೆಯ ಇಂಗ್ಲಿಷ್ ಅನುವಾದವನ್ನು ಕಳಿಸಿಕೊಡುವಂತೆ ಕುವೆಂಪು ಅವರನ್ನು ಕೇಳಿಕೊಂಡರು.




ತಾವು ಕೀರ್ತಿಯ ಮೇರುಶಿಖರದಲ್ಲಿ ಇದ್ದಾಗಲೂ, ಕುವೆಂಪು ತಮ್ಮ ತಾಯಿಬೇರಾದ ರಾಮಕೃಷ್ಣ ಮಠದ ಸಂಪರ್ಕವನ್ನು ಕಡಿದುಕೊಳ್ಳಲಿಲ್ಲ. ತಮ್ಮ ಎರಡು ಮಹಾನ್ ಕೃತಿಗಳಾದ ಶ್ರೀ ‘ರಾಮಕೃಷ್ಣ ಪರಮಹಂಸ’ ಮತ್ತು ‘ಸ್ವಾಮಿ ವಿವೇಕಾನಂದ’ – ಈ ಗ್ರಂಥಗಳ ಸ್ವಾಮ್ಯವನ್ನು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮಕ್ಕೆ ಬಿಟ್ಟುಕೊಟ್ಟರು. ಮಠದ ಸಂನ್ಯಾಸಿಗಳೊಬ್ಬರು ಕನ್ನಡಕ್ಕೆ ಅನುವಾದಿಸಿದ ಬಂಗಾಳಿಯ ‘ಶ್ರೀರಾಮಕೃಷ್ಣ ಕಥಾಮೃತ’ವನ್ನು

ಆಮೂಲಾಗ್ರವಾಗಿ ಪರಿಷ್ಕರಿಸುವ ಕಾರ್ಯದಲ್ಲಿ ಸಹಾಯ ಮಾಡಿದರು. ಇದಲ್ಲದೆ, ಕನ್ನಡಕ್ಕೆ ಅವತರಣಗೊಂಡ ಬಂಗಾಳಿಯ ಈ ಆಧ್ಯಾತ್ಮಿಕ ಸೌರಭಕ್ಕೆ 'ಶ್ರೀರಾಮಕೃಷ್ಣ ವಚನವೇದ' ಎಂಬ ಅನ್ವರ್ಥನಾಮವನ್ನು ನೀಡಿದರು. ಇದಲ್ಲದೆ, ಇದಕ್ಕೆ ತಮ್ಮದೇ ಆದ ವಿಶಿಷ್ಟಶೈಲಿಯಲ್ಲಿ ಗಂಭೀರವಾದ, ಗೂಢಾರ್ಥದಿಂದ ಕೂಡಿದ ಮುನ್ನುಡಿಯನ್ನು ಬರೆದುಕೊಟ್ಟರು. ಅದರಲ್ಲಿ ಶ್ರೀ ರಾಮಕೃಷ್ಣರ ಬೋಧನೆಗಳು ಈ ಆಧುನಿಕ ಯುಗಕ್ಕೆ ಎಷ್ಟು ಪ್ರಾಸಂಗಿಕವಾಗಿದೆ ಎಂದು ತಿಳಿಸಿಕೊಟ್ಟರು. ಅದು ಪ್ರತಿಯೊಬ್ಬರ ಮನೆಯಲ್ಲಿ ಇರಬೇಕಾದ 'ಕರತಲ ದೇವಸ್ಥಾನ' ಎಂದು ಬಣ್ಣಿಸಿದರು.

ಕುವೆಂಪು ಅವರು ತಮ್ಮ ಗುರುಗಳಾದ ಪೂಜ್ಯ ಸ್ವಾಮಿ ಶಿವಾನಂದಜಿ ಮಹಾರಾಜರ ಆಧ್ಯಾತ್ಮಿಕ ಸಂಭಾಷಣೆಗಳನ್ನು ಕನ್ನಡಕ್ಕೆ ಉಜ್ವಲ ಭಾಷೆಯಲ್ಲಿ, 'ಗುರುವಿನೊಡನೆ ದೇವರಡಿಗೆ' ಎನ್ನುವ ಪ್ರಾಂಜಲ ಶೀರ್ಷಿಕೆಯ ಅಡಿಯಲ್ಲಿ ಅನುವಾದ ಮಾಡಿಕೊಟ್ಟಿದ್ದಾರೆ. ಇಲ್ಲಿ ಶ್ರೀರಾಮಕೃಷ್ಣರ ಮೇಲಿನ ಅವರ ಅಪಾರ ಭಕ್ತಿ ಮತ್ತು ಶ್ರದ್ಧೆಗಳು ಪ್ರತಿಯೊಂದು ವಾಕ್ಯದಲ್ಲಿಯೂ ವ್ಯಕ್ತವಾಗುವುದನ್ನು ನಾವು ಕಾಣಬಹುದು.

ಇದಲ್ಲದೆ, ವಿದ್ವಾಂಸರು ಗಮನಿಸಿದ ಹಾಗೆ, ಕುವೆಂಪು ಅವರ ಇಡೀ ಕಾವ್ಯವಾಙ್ಮಯ ಪ್ರಪಂಚವೇ ರಾಮಕೃಷ್ಣ-ವಿವೇಕಾನಂದ ಭಾವಧಾರೆಯ ಪ್ರಭಾವದಿಂದ ಪರಿಪ್ಲುತವಾಗಿದೆ. ಇದು ಅವರ ಮೇರುಕೃತಿಯಾದ 'ರಾಮಾಯಣ ದರ್ಶನಂ' ನಲ್ಲಿ ಮಾತ್ರವಲ್ಲದೆ, ಅವರ ಹತ್ತುಹಲವು ಕವಿತೆಗಳು, ವೈಚಾರಿಕ ಲೇಖನಗಳು, ಹಲವು ಮಹತ್ವದ ಸಂದರ್ಭಗಳಲ್ಲಿ ಅವರು ಮಾಡಿದ ಭಾಷಣಗಳು – ಇವೆಲ್ಲವುಗಳಲ್ಲಿ ಪ್ರತಿಧ್ವನಿಸಿದೆ. ಒಟ್ಟಾರೆ ಹೇಳುವುದಾದರೆ, ಕುವೆಂಪು ಅವರು ರಾಮಕೃಷ್ಣ-ವಿವೇಕಾನಂದ ಭಾವಧಾರೆಯ ಪ್ರಚಾರವನ್ನು ತಮ್ಮದೇ ಆದ ಸಾಹಿತ್ಯಪ್ರಕಾರದಲ್ಲಿ ಸ್ನಿಗ್ಧಮನಸ್ಸಿನಿಂದ ಕೈಗೊಂಡರು.

## ಜೀವನಚರಿತ್ರೆಗಳು




ಕುವೆಂಪು ರಾಮಕೃಷ್ಣ- ವಿವೇಕಾನಂದ ಸಾಹಿತ್ಯಕ್ಕೆ ನೀಡಿದ ಮಹೋನ್ನತ ಕೊಡುಗೆಯೆಂದರೆ ಅವರು ರಚಿಸಿದ ಶ್ರೀಗುರುದೇವರ ಮತ್ತು ಅವರ ಪರಮ ಸಂನ್ಯಾಸಿ ಶಿಷ್ಯರ ಜೀವನ ಚರಿತ್ರೆಗಳು, ಸಾಹಿತ್ಯಕವಾಗಿ ಅವುಗಳ ಮೌಲ್ಯ ಅಮೂಲ್ಯ. ಹಲವು ಪೀಳಿಗೆಗಳ ಕನ್ನಡ ಜನತೆ ಇವುಗಳನ್ನು ಅಧ್ಯಯನ ಮಾಡಿ, ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಜೀವನ ಪರಿಚಯವನ್ನು ಮೊದಲ ಬಾರಿಗೆ ಪಡೆದುಕೊಂಡಿದ್ದಾರೆ; ಆಧ್ಯಾತ್ಮಿಕ ಭಾವಾಮೃತದಲ್ಲಿ ಮಿಂದು ಧನ್ಯರಾಗಿ ತಮ್ಮ ಬದುಕನ್ನು ಸಾರ್ಥಕ ಪಡಿಸಿಕೊಂಡಿದ್ದಾರೆ. ರಾಮಕೃಷ್ಣ ಭಾವಧಾರೆಯಲ್ಲಿ ಮತ್ತಷ್ಟು ಮಿಂದು, ರಾಮಕೃಷ್ಣ ಆಶ್ರಮಗಳ ಭಕ್ತರಾಗಿ ದಿವ್ಯತ್ರಯರ ಕೃಪೆಗೆ ಪಾತ್ರರಾಗಿದ್ದಾರೆ.

**'ಶ್ರೀರಾಮಕೃಷ್ಣ ಪರಮಹಂಸ'** ಗ್ರಂಥದಲ್ಲಿ ಕುವೆಂಪು ಅವರು ಶ್ರೀರಾಮಕೃಷ್ಣರ ವ್ಯಕ್ತಿತ್ವವನ್ನು ಕಂಡು ಆರಾಧಿಸಿರುವ ಪರಿ ಅನನ್ಯವಾದುದು. ಶ್ರೀರಾಮಕೃಷ್ಣರ ಭೂ ಅವತರಣದ ಹಿಂದಿನ ಭಗವತ್ ಶಕ್ತಿಯನ್ನು ಅವರು ವರ್ಣಿಸಿರುವ ವಿಧಾನ ವಿಶಿಷ್ಟವಾದುದು:

''... ಇಂತಹ ವಿಷಮ ಸಮಯದಲ್ಲಿ ಇತಿಹಾಸವು ಸಮನ್ವಯಾಚಾರ್ಯನೊಬ್ಬನನ್ನು ನಿರೀಕ್ಷಿಸುತ್ತದೆ. ಆ ಇತಿಹಾಸದ ಪ್ರಾರ್ಥನೆ ವ್ಯರ್ಥವಾಗಲಿಲ್ಲ. ವಿಶ್ವಗರ್ಭದ ನಿಗೂಢ ಅಂತರಾಳದಲ್ಲಿ ಸರ್ವದಾ ಸುಪ್ತವಾಗಿದ್ದರೂ ಚಿರಜಾಗ್ರತವಾಗಿರುವ ತ್ರೈಲೋಕ್ಯ ಕಂಪನಕಾರಿಯಾದ ಮಹಾಚೈತನ್ಯಶಕ್ತಿ ಭರತವರ್ಷದಲ್ಲಿ ಗಂಗಾ ಪುಣ್ಯಜಲಪ್ಲಾವಿತ ವಂಗದೇಶದಲ್ಲಿ ದ್ವಿರೂಪಧಾರಣೆ ಮಾಡಿ ಅವತರಿಸಿತು; ಆ ಮಹಾ ಚೈತನ್ಯಶಕ್ತಿಯ ಮೂಲಮೂರ್ತಿಯೆ ಶ್ರೀರಾಮಕೃಷ್ಣ ಪರಮಹಂಸರು; ಉತ್ಸವಮೂರ್ತಿಯೆ ಸ್ವಾಮಿ ವಿವೇಕಾನಂದರು.'' *('ಶ್ರೀರಾಮಕೃಷ್ಣ ಪರಮಹಂಸ', ಪುಟ ೧೩)*

ಶ್ರೀರಾಮಕೃಷ್ಣರ ಮೊದಲ ಭಾವಸಮಾಧಿಯನ್ನು ಕುವೆಂಪು ವಿಶ್ಲೇಷಿಸಿರುವುದು ಅವರ ತಾತ್ತ್ವಿಕ ಮತ್ತು ಅನುಭಾವಿಕ ಪರಿಜ್ಞಾನದ ಅಗಾಧತೆಯನ್ನು ಎತ್ತಿತೋರಿಸುತ್ತದೆ. ಅವರ ಪ್ರಕಾರ, ''ಶ್ರೀರಾಮಕೃಷ್ಣರಿಗೆ ಮೊತ್ತಮೊದಲು ಬ್ರಹ್ಮಸಾಕ್ಷಾತ್ಕಾರಕ್ಕೆ ಮುನ್ನುಡಿಯಾದುದು ಸೌಂದರ್ಯದ ಸನ್ನಿಧಿಯಲ್ಲಿ. ಅವ್ಯಕ್ತವೂ ನಿರ್ಗುಣ ನಿರಾಕಾರವೂ ಆಗಿರುವ ಪರತತ್ತ್ವವು ಪ್ರಕಾಶವಾಗಬೇಕಾದರೆ ವ್ಯಕ್ತವೂ ಸಗುಣ ಸಾಕಾರವೂ ಆಗಿರುವ ಸೌಂದರ್ಯವಾಗಬೇಕು.'' *(ಪುಟ ೧೯)* ಇಂಥ ಸೌಂದರ್ಯ ಬ್ರಹ್ಮನ ಅನುಭವವನ್ನೇ ಶ್ರೀರಾಮಕೃಷ್ಣರು ಪಡೆದುಕೊಂಡದ್ದು.

ಶ್ರೀರಾಮಕೃಷ್ಣರ ಜೀವನದಲ್ಲಿ ಬರುವ ಹತ್ತುಹಲವು ಘಟನೆಗಳಿಗೆ ವೈಚಾರಿಕ ದೃಷ್ಟಿಕೋನದಿಂದ ಕುವೆಂಪು ಅವರು ವ್ಯಾಖ್ಯಾನ ನೀಡಿದ್ದಾರೆ. ಹಳೆಯ ಕಂತೆಪುರಾಣಗಳ ಧರ್ಮದ ಬದಲು ಭಗವತ್ಸಾಕ್ಷಾತ್ಕಾರದ ಹಂಬಲವೇ ಸಾರಸರ್ವಸ್ವವಾಗಿರುವ ಧರ್ಮದ ಪ್ರತಿರೂಪರೆಂಬಂತೆ ಶ್ರೀರಾಮಕೃಷ್ಣರನ್ನು ಅವರು ಕಾಣುತ್ತಾರೆ. ಗುರುದೇವರು ಪಡೆದ ಕಾಳಿಯ ದರ್ಶನವನ್ನು ಕುವೆಂಪು, ''ಜಗತ್ತೆಲ್ಲ ಜಗನ್ಮಾತೆಯಾಯಿತು, ಜಡವೆಲ್ಲ ಚೇತನವಾಯಿತು'' *(ಪುಟ, ೪೩)* ಎಂದು ಬಣ್ಣಿಸುತ್ತಾರೆ. ಅವರು ಶ್ರೀರಾಮಕೃಷ್ಣರ ಭಾವಮುಖದ ಬಗ್ಗೆ ಅಡಿಟಿಪ್ಪಣಿಯಲ್ಲಿ *(ಪುಟ, ೫೧)* ನೀಡಿರುವ ವಿವರಣೆಯಂತೂ ತಾತ್ತ್ವಿಕವಾಗಿ ಮಹತ್ವವಾದುದು. '' 'ನಾನು' ಎಂಬುದು ಸಂಪೂರ್ಣ ವಿಲುಪ್ತವಾಗಿರುವ ಗುರುದೇವರ ವಿರಾಟ್

ಮನದಲ್ಲಿ ನಾನಾಭಾವತರಂಗಗಳು ಮೂಡಿ, ಆಡಿ, ಮರಳಿ ಮಿಡಿಯುವಂತೆ ತೋರುತ್ತಿತ್ತು... ನಿಸ್ತರಂಗ ವಿರಾಟವೆ ನಿರ್ಗುಣ ಬ್ರಹ್ಮ; ಸತರಂಗ ವಿರಾಟವೆ ಸಗುಣ ಬ್ರಹ್ಮ. ನಿರ್ಗುಣ ಸಗುಣಗಳ ಮಧ್ಯೆ ಇರುವು ವಿರಾಟ್ ಅಹಂಕಾರವೇ 'ಭಾವಮುಖ' '' ಎಂದು ಕುವೆಂಪು ಬಣ್ಣಿಸುತ್ತಾರೆ.

ಶ್ರೀರಾಮಕೃಷ್ಣರು ಪಡೆದ ನಿರ್ವಿಕಲ್ಪ ಸಮಾಧಿಯ ಮಹತ್ವವನ್ನು ಕುವೆಂಪು ಸುಮನೋಹರವಾಗಿ ವಿವರಿಸುತ್ತಾರೆ: ''ಚಿಂತೆಗೆ ಅತೀತವಾಗಿ, ದ್ವಂದ್ವ ಸಾಮ್ರಾಜ್ಯದ ಎಲ್ಲೆ ಮೀರಿ, ವಿಕೃತಿಪ್ರಕೃತಿಗಳಿಂದ ಕೂಡಿದ ಮಾಯೆಯನ್ನು ಹಿಂದುಳಿದು, ಸೃಷ್ಟಿ ಸ್ಥಿತಿ ಲಯಜಾಲವನ್ನು ಉತ್ತರಿಸಿ, ಸುಖದುಃಖ ಸದಸತ್ತು ಪಾಪಪುಣ್ಯ ಮೊದಲಾದ ಭಾವಗಳನ್ನು ಕೊಚ್ಚಿಕೆಡಹಿ, ನಿತ್ಯತತ್ತ್ವವಾದ ಸಚ್ಚಿದಾನಂದ ಬ್ರಹ್ಮವು ನಿರ್ವಿಕಲ್ಪಸಮಾಧಿಯಲ್ಲಿ ಸ್ವಯಂಜ್ಯೋತಿಯಿಂದ ಪ್ರಜ್ವಲಿಸುತ್ತದೆ.'' *(ಪುಟ ೬೭)*


ಶ್ರೀರಾಮಕೃಷ್ಣರ ಪತ್ನೀಸ್ವೀಕಾರದಲ್ಲಿ ನವೀನತೆಯನ್ನು ಕಂಡವರು ಕುವೆಂಪು. ಅವರು ಹೇಳುವಂತೆ, ''ಶ್ರೀರಾಮಕೃಷ್ಣ ಮತ್ತು ಶಾರದಾದೇವಿಯವರ ಪವಿತ್ರ ಸಂಬಂಧವು ಜಗಜ್ಜೀವನಜಾಲದಲ್ಲಿ ಒಂದು ನೂತನ ಜ್ಯೋತಿಸ್ಸೂತ್ರವೇ ಆಗಿದೆ. ಕಾಮವಾಸನೆ ಲೇಶಮಾತ್ರವೂ ಇಲ್ಲದ ಆ ಪಾವನ ಪ್ರೇಮಸ್ರೋತವು ಗಂಗೆಗೆ ಗಂಗೆಯಾಗಿದೆ.'' *(ಪುಟ ೮೦)*

ಶ್ರೀರಾಮಕೃಷ್ಣರ ಸಾಧನಾ ಅವಧಿಯ ನಂತರ ಅನೇಕ ಶಿಷ್ಯರು ಅವರೆಡೆಗೆ ಬರಲಾರಂಭಿಸಿದರು. ಈ ಬರುವಿಕೆಯನ್ನು ''ಮಾನಸಸರೋವರದಲ್ಲಿ ಅರಳಿದ ಮಹಾಪದ್ಮವು ಬಂಡಿನ ಬಿಣ್ಪಿನಿಂದ ಬಿರಿಬಿರಿದು ಪರಮೆಗಳ ಬರವನ್ನೆ ಕಾಯುತ್ತಿತ್ತು. ತಾವರೆಯ ಹಾರೈಕೆಯಂತೆ ಕೆಲವು ಅಳಿಗಳು ಬಂದವು'' *(ಪುಟ ೧೫೬)* ಎಂದು ಕುವೆಂಪು ವರ್ಣಿಸುತ್ತಾರೆ. ಶಿಲೆಯ ಓರೆಕೋರೆಗಳನ್ನು ಶಿಲ್ಪಿಯು ಪ್ರತಿಮೆಯಾಗಿ ಮೂಡಿಸುವಂತೆ, ಈ ದೇವಶಿಲ್ಪಿಯು ಈ ಯುವಶಿಷ್ಯರ ವ್ಯಕ್ತಿತ್ವವನ್ನು ಆಧ್ಯಾತ್ಮಿಕ ರತ್ನಗಳನ್ನಾಗಿ ರೂಪಿಸಿದನು.

ಗುರುದೇವರ ಮಹಾಸಮಾಧಿಯು ಮಹಾಕವಿಯಾದ ಕುವೆಂಪು ಅವರ ಪಾಲಿಗೆ ಹೀಗೆ ತೋರಿಬಂತು: ''ಇದುವರೆಗೆ ಶ್ರೀರಾಮಕೃಷ್ಣ ಪರಮಹಂಸರ ಜೀವನಗಂಗೆಯನ್ನು ಜನ್ಮಸ್ಥಾನದಿಂದಲೂ ಅನುಸರಿಸಿ ಬಂದಿದ್ದೇವೆ. ಆ ಮಹಾನದಿಯ ಶೈಶವ ಕೌಮಾರ ಯೌವನಗಳನ್ನು ಮನವಾರೆ ಅವಲೋಕಿಸಿದ್ದೇವೆ. ಬನ್ನಿ, ನದಿ ಸಮುದ್ರದಲ್ಲಿ ಸಮಾಧಿಹೊಂದುವ ಮಹಿಮಾಮಯ ದೃಶ್ಯವನ್ನು ಸಂದರ್ಶಿಸಿ.'' *(ಪುಟ ೧೮೯)*

ಒಟ್ಟಾರೆ, ಕುವೆಂಪು ಬರೆದ ಶ್ರೀರಾಮಕೃಷ್ಣರ ಜೀವನ ಚರಿತ್ರೆಯು ಎಲ್ಲ ವಿಧದಿಂದಲೂ ಒಂದು ಗದ್ಯಕಾವ್ಯವಾಗಿದೆ; ಅದು ಜೀವನವೃತ್ತಾಂತ ಮಾತ್ರವಾಗಿರದೆ, ದಾರ್ಶನಿಕ ಕವಿಯೊಬ್ಬನ ಮಾನಸ ಸರೋವರದಿಂದ ಸ್ಫುರಿತವಾದ ಭಾವಪಂಕಜವಾಗಿದೆ ಎನ್ನಬಹುದು. ೧೯೩೪ರಲ್ಲಿ ಮೊದಲು ಪ್ರಕಟಗೊಂಡ ಈ ಗ್ರಂಥವು ಇಂದಿಗೂ ಅಪಾರ ಜನಪ್ರಿಯತೆಯನ್ನು ಪಡೆದುಕೊಂಡು, ಮತ್ತೆ ಮತ್ತೆ ಮುದ್ರಣಗೊಳ್ಳುತ್ತಿರುವುದು ಇದರ ಕಾಲಾತೀತ ಮೌಲ್ಯಕ್ಕೆ ಸಾಕ್ಷಿಯಾಗಿದೆ.

ಇದಕ್ಕೂ ಮುಂಚೆ, ೧೯೩೨ರಲ್ಲಿಯೇ ಪ್ರಕಟವಾದದ್ದು **'ಸ್ವಾಮಿ ವಿವೇಕಾನಂದ'** ಕೃತಿ. ಡಿ.ವಿ. ಗುಂಡಪ್ಪನವರು ಈ ಪುಸ್ತಕಕ್ಕೆ ಬರೆದ ತಮ್ಮ ಮುನ್ನುಡಿಯಲ್ಲಿ ಹೇಳಿರುವ ಈ ಮಾತು, ಇದನ್ನು ಓದಿದ ಎಲ್ಲರಿಗೂ ಸರ್ವಸಮ್ಮತವಾಗುವುದರಲ್ಲಿ ಸಂದೇಹವಿಲ್ಲ: ''...ಇಂಥ ಮಹಾನುಭಾವರ ಜೀವಿತದ ಚಿತ್ರವನ್ನು ನಮ್ಮ ಶ್ರೀಮಾನ್ ಪುಟ್ಟಪ್ಪನವರು ಪುಸ್ತಕದಲ್ಲಿ ಚಿತ್ರಿಸಿರುವುದು. ಅವರದು ಕವಿ ಸಹಜವಾದ ವಾಣಿ. ಅವರ ಭಾವಪ್ರಪಂಚದಲ್ಲಿಯ ಭಕ್ತಿಗೋಪುರಗಳೂ, ಅಲ್ಲಿಯ ಉತ್ಸಾಹ ಪ್ರವಾಹದ ತರಂಗಮಾಲೆಗಳೂ, ಅಲ್ಲಿಯ ಸೂರ್ಯೋದಯದ ಸ್ವರ್ಣಾರುಣರಾಗಚ್ಛಾಯೆಗಳೂ ಈ ವಾಣಿಯಲ್ಲಿ ಮೂರ್ತೀಭವಿಸಿವೆ.''




ಈ ಗ್ರಂಥದ ಆರಂಭ ಅತ್ಯಂತ ವಿಶಿಷ್ಟಶೈಲಿಯಲ್ಲಿ ಮೂಡಿ ಬಂದಿದೆ. 'ಯಾರಿವನು?' ಎಂಬ ಶೀರ್ಷಿಕೆಯಲ್ಲಿರುವ ಈ ಅವತರಣಿಕೆಯು ಸ್ವಾಮಿ ವಿವೇಕಾನಂದರು ಕನ್ಯಾಕುಮಾರಿಯ ಕಡಲಿನ ಬಂಡೆಯ ಮೇಲೆ ಕುಳಿತು ಧ್ಯಾನಮಗ್ನರಾದ ವೃತ್ತಾಂತವನ್ನು ಚೇತೋಹಾರಿಯಾಗಿ ವರ್ಣಿಸುತ್ತದೆ. ಇದರ ಪ್ರತಿಯೊಂದು ವಾಕ್ಯವೂ ಕಾವ್ಯಮಯವಾಗಿದ್ದು, ಧನ್ಯತಾಭಾವವನ್ನು ನಮ್ಮ ಮನಸ್ಸಿನಲ್ಲಿ ಮೂಡಿಸುತ್ತದೆ: ''ಸುತ್ತಲೂ ಕಡಲಿನ ತೆರೆಗಳು ಮೊರೆದವು. ಆದರೆ ಆತನ ಹೃದಯದಲ್ಲಿ ಭಾವತರಂಗಗಳು ಇನ್ನೂ ಅತಿಶಯವಾಗಿ ಮೊರೆಯತೊಡಗಿದವು.'' *(ಸ್ವಾಮಿ ವಿವೇಕಾನಂದ, ಪುಟ ೪)* ಸ್ವಾಮಿ ವಿವೇಕಾನಂದರ ಇಡೀ ಜೀವಿತೋದ್ದೇಶವನ್ನು ಅವರ ಮನಸ್ಸಿನ ಹೊಯ್ದಾಟಗಳ ರೂಪದಲ್ಲಿ, ಅವರೇ ತೋಡಿಕೊಳ್ಳುವಂತೆ ಚಿತ್ರಿಸಿರುವುದು ಕನ್ನಡ ಸಾಹಿತ್ಯದಲ್ಲಿಯೇ ಒಂದು ಅಪೂರ್ವವಾದ ಚಿತ್ರಣವಾಗಿದೆ.

ಕುವೆಂಪು ವೈಚಾರಿಕತೆಗೆ ಹೆಸರಾದವರು. 'ನಿರಂಕುಶಮತಿಗಳಾಗಿ' ಎಂದು ತಮ್ಮ ಕಾಲದ ಯುವಕರನ್ನು ಪ್ರೇರೇಪಿಸಿದವರು. ಇದಕ್ಕೆ ಅವರಿಗೆ ಸ್ಫೂರ್ತಿಯ ಸೆಲೆಯಾಗಿದ್ದವರು ಸ್ವಾಮಿ ವಿವೇಕಾನಂದರು. ಹೀಗೆಂದೇ ಈ ಪುಸ್ತಕದ ಒಂದು ಅಧ್ಯಾಯದ

ಹೆಸರು 'ನಿರಂಕುಶಮತಿ' ಎಂದಾಗಿದೆ. ೧೯ನೆಯ ಶತಮಾನದ ಉತ್ತರಾರ್ಧದ ಚಿಂತನಾ ಸಂಘರ್ಷವನ್ನು ವಿವರಿಸಿ, ಈ ಕಾಲ ಘಟ್ಟದಲ್ಲಿ ಯುವಕ ನರೇಂದ್ರನಾಥನ ತಾರುಣ್ಯವನ್ನು ಅವರು ವರ್ಣಿಸಿರುವುದು ಹೀಗೆ: ''ನರೇಂದ್ರನ ತಾರುಣ್ಯವು ಮೇಲೆ ವರ್ಣಿಸಿದ ರಣರಂಗದ ಮಧ್ಯೆ ಬೆಳೆಯುತ್ತಾ, ಅದರ ನೂತನತೆ, ಅದರ ಉತ್ಸಾಹ, ಅದರ ಪ್ರತಿಭಟನೆ, ಅದರ ಧೂರ್ತತೆ, ಅದರ ಸಾಹಸಪ್ರಿಯತೆ, ಅದರ ಸತ್ಯಾನ್ವೇಷಣೆ, ಅದರ ನಿರ್ವಂಚನೆ, ಅದರ ನಿರಂಕುಶಮತಿ, ಅದರ ಪ್ರಯೋಗಶೀಲತೆ ಇತ್ಯಾದಿ ಗುಣಗಣಗಳೆಲ್ಲವನ್ನೂ ಹೀರಿಕೊಂಡು ತೋಳುತಟ್ಟಿ ಮಲೆಯುವ ಜಗಜಟ್ಟಿಯಾಗಿತ್ತು.'' *(ಪುಟ ೪೬)*

ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣದ ಪ್ರಭಾವವನ್ನು ಕುವೆಂಪು, ''ಈ ವೇದಗಂಭೀರವಾಣಿ ಅಮೆರಿಕದಲ್ಲೆಲ್ಲ ಮೊಳಗಿ ಬೆರಗುಗೊಳಿಸಿತು. ಅದರ ಪ್ರಭಾವ ಭವ್ಯಾದ್ಭುತವಾಗಿತ್ತು. ಹಿಮಾಲಯ ಪರ್ವತಧ್ವನಿ ಅಮೆರಿಕಾದಲ್ಲಿ ಮೊಳಗಿದಂತಿತ್ತು'' *(ಪುಟ ೧೨೯)* ಎಂದು ವರ್ಣಿಸುತ್ತಾರೆ. ವಿಶ್ವವಿಜೇತರಾಗಿ ಮರಳಿ ಬಂದ ಸ್ವಾಮೀಜಿಯನ್ನು ಬರಮಾಡಿಕೊಳ್ಳಲು ಭಾರತ ಜನತೆ ಸನ್ನದ್ಧವಾಗಿದ್ದನ್ನು ಕುವೆಂಪು ಹೀಗೆ ಬಣ್ಣಿಸುತ್ತಾರೆ: ''ಉರಿವ ಕಡುಬೇಸಗೆಯ ಕಾಳ್ಗಿಚ್ಚಿನಂತೆ, ನಲಿವ ಬಸಂತನ ಮೈಸಿರಿಂಪಿನಂತೆ, ಪೂಗಳ ಕಂಪಿನಿಂದ ಕುಸಿಕುಸಿದು ತೀಡುವ ಬನದೆಲರಂತೆ, ಪಸರಿಸುವ ಇರುಳ ಬೆಳ್ದಿಂಗಳಂತೆ, ಮೂಡಿಬರುವ ನೇಸರಿನ ಹೊಂಗದಿರಂತೆ, ಯುಗಾಚಾರ್ಯ ಯೋಗಿವರ್ಯ ಶ್ರೀವಿವೇಕಾನಂದ ಸ್ವಾಮಿಗಳ ಪುಣ್ಯಾಗಮನವಾರ್ತೆ ಭಾರತ ವರ್ಷದಲ್ಲೆಲ್ಲಾ ಹಬ್ಬಿತು. ವಿದೇಶಗಳಲ್ಲಿ ವಿಜಯಿಯಾಗಿ ಹಿಂತಿರುಗಿ ಬರುವ ತನ್ನ ಮುದ್ದು ಮಗನನ್ನು ಎದುರುಗೊಳ್ಳಲು ಭಾರತ ಜನನಿ ಸಡಗರದಿಂದ ಸಿದ್ಧಳಾದಳು.'' *(ಪುಟ ೧೬)*

ಕಟ್ಟಕಡೆಯ ಅಧ್ಯಾಯವನ್ನು 'ಕರೆಯುತಿದೆ ಯುಗವಾಣಿ' ಎಂದು ಕರೆದು, ಸ್ವಾಮಿ ವಿವೇಕಾನಂದರ ವಿಶ್ವಸಂದೇಶದ ಮಹತ್ವವನ್ನು ಕುವೆಂಪು ಸಾರಭೂತವಾಗಿ ನಮಗೆ ಉಣಿಯಬಡಿಸುತ್ತಾರೆ: ''ಅದು ಒಂದು ವ್ಯಕ್ತಿಯ ವಾಣಿಯಲ್ಲ; ಒಂದು ಕಣ್ಣಿನ ಕಾಂತಿಯಲ್ಲ. ಅನೇಕ ಮಹಾಪುರುಷರ ಜೀವನಜ್ಯೋತಿಗಳ ಸೂತ್ರಸಮಷ್ಟಿಯಾಗಿದೆ.'' *(ಪುಟ ೨೧೩)*

### ಮುನ್ನುಡಿಗಳ ಮಾರ್ಮಿಕತೆ

ಕುವೆಂಪು ಅವರ ಇನ್ನೊಂದು ಹೆಗ್ಗಳಿಕೆಯೆಂದರೆ, ರಾಮಕೃಷ್ಣ ಮಹಾಸಂಘವು ಕನ್ನಡದಲ್ಲಿ ಪ್ರಕಟಿಸಿರುವ ಐದು ಮಹತ್ವದ ಗ್ರಂಥಗಳಿಗೆ ಅವರು ಬರೆದ ಮನೋಜ್ಞ ಮುನ್ನುಡಿಗಳು. ಆ ಗ್ರಂಥರತ್ನಗಳೆಂದರೆ, ಶ್ರೀರಾಮಕೃಷ್ಣ ವಚನವೇದ, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಶ್ರೀಶಾರದಾದೇವಿ (ಸ್ವಾಮಿ ಸೋಮನಾಥಾನಂದ), ಕೊಲೊಂಬೋ ಇಂದ ಆಲ್ಮೋರಕೆ ಮತ್ತು ಹಿಮಾಲಯಯಾತ್ರೆ. ಬಂಗಾಳಿಯ ಕಥಾಮೃತಕ್ಕೆ ವಚನವೇದವೆಂದು ಹೆಸರಿಟ್ಟವರೂ ಕುವೆಂಪುವೇ. ಇದನ್ನು ಅವರು ತಮ್ಮ ಮುನ್ನುಡಿಯಲ್ಲಿ ಹೀಗೆ ಸಮರ್ಥಿಸಿಕೊಳ್ಳುತ್ತಾರೆ:

''ವೇದ ಎಂದರೆ ನಿತ್ಯಜ್ಞಾನ. ಅದು ಸನಾತನ. ಅದು ಅಪೌರುಷೇಯ. ಅಂದರೆ ಯಾವ ಮಾನವವ್ಯಕ್ತಿಯಿಂದಲೂ ಹುಟ್ಟಿಬಂದುದಲ್ಲ... ಅಂತೂ ಸದ್ಯಕ್ಕೆ ಅತೀತವಾಗಿರುವ ವೇದ ಅನಂತವಾಗಿರುವುದರಿಂದ ಲೋಕಕ್ಕಿಳಿಯುವ ನಮ್ಮ ವೇದವೂ ಕೊನೆಯಿಲ್ಲದೆ ಮುಂದುವರಿಯುವುದರಲ್ಲಿ ಸಂದೇಹವಿಲ್ಲ. ಶ್ರೀರಾಮಕೃಷ್ಣರಂತಹ ಸಿದ್ಧಪುರುಷನ, ಮಹರ್ಷಿಯ, ದ್ರಷ್ಟಾರನ, ಅವತಾರವರಿಷ್ಠನ ವಾಕ್‌ಶ್ರೀಯನ್ನು ವಚನವೇದ ಎಂದು ಕರೆಯುವುದರಲ್ಲಿ ಅನೌಚಿತ್ಯವೆಲ್ಲಿ ಬಂತು?'' *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಮುನ್ನುಡಿ, ಪು. ೮)*

ಕುವೆಂಪು ಅವರ ಪಾಲಿಗೆ ಈ ವಚನವೇದವೆಂದರೆ ಅದೊಂದು ಕರತಲ ದೇವಸ್ಥಾನ, ಕರತಲ ತಪೋರಂಗ, ಕರತಲ ಪುಣ್ಯಕ್ಷೇತ್ರ. ''ಯಾವ ಮನೆಯಲ್ಲಿ ಈ 'ವಚನವೇದ'ವಿರುತ್ತದೆಯೋ ಅದು ಮಂದಿರವಾಗುತ್ತದೆ. ಯಾರ ಕೈ ಇದನ್ನು ಹಿಡಿದಿರುತ್ತದೆಯೊ ಅದು ಭಗವಂತನ ಪಾದಾರವಿಂದವನ್ನೆ ಧರಿಸಿರುತ್ತದೆ. ಯಾರ ಜಿಹ್ವೆ ಇದನ್ನು ಪಠಿಸುತ್ತದೆಯೊ ಅದು ಅಮೃತವನ್ನೇ ಈಂಟುತ್ತಿರುತ್ತದೆ.'' *(ಅಲ್ಲೇ, ಪು. ೬)*

ಈ ಮುನ್ನುಡಿಯು ವಿಶ್ವವಿಖ್ಯಾತ ಪ್ರಸಿದ್ಧಿಯನ್ನು ಪಡೆದಿದೆ. ಹಲವಾರು ಭಾಷೆಗಳಿಗೆ ಅನುವಾದವಾಗಿದೆ. ಇಲ್ಲಿರುವ ಅಪೂರ್ವ, ವಿನೂತನ ಭಾವನೆಗಳು ಜಗತ್ತಿನಾದ್ಯಂತ ಪಸರಿಸಿವೆ.

ಇದೇ ರೀತಿ ಕುವೆಂಪು ತಾವು 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ'ಗೆ ಬರೆದ ಮುನ್ನುಡಿಯಲ್ಲಿಯೂ ನವೀನತೆಯನ್ನು ತೋರಿದ್ದಾರೆ. ಸ್ವಾಮೀಜಿಯವರ ಮಹತ್ ಜೀವನಸಾಧನೆಯನ್ನು ತಮ್ಮ ಪ್ರಖರ ಬುದ್ಧಿಮತ್ತೆಯಿಂದ ವಿಶ್ಲೇಷಿಸಿದ್ದಾರೆ. ಸ್ವಾಮೀಜಿಯವರ ಮೊದಲ ಮಹತ್ವದ ಕಾರ್ಯವೆಂದರೆ, ''ಶ್ರೀರಾಮಕೃಷ್ಣರಿಂದ ಅನುಷ್ಠಿತವೂ ಪ್ರಣೀತವೂ ಆಗಿರುವ ಸರ್ವಧರ್ಮ ಸಮನ್ವಯ ದೃಷ್ಟಿಯನ್ನು ಪ್ರಸಾರ ಮಾಡಿ, ಪೂರ್ವ ಪಶ್ಚಿಮ ದೇಶಗಳ ನಡುವೆ ಭವ್ಯವಾದ ಭಾವಸೇತುವೆಯನ್ನು ಬೀಸಿ, ವಿಶ್ವಮೈತ್ರಿಗೆ ಮತ್ತು ವಿಶ್ವಪ್ರಜ್ಞೆಗೆ ಅಂಕುರಾರ್ಪಣ ಮಾಡಿ, ಲೋಕಹೃದಯವನ್ನು ಸಂಕುಚಿತ ಬುದ್ಧಿಯಿಂದ ಪಾರು ಮಾಡಿದುದು.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೧, ಪುಟ xi).* ಕುವೆಂಪು ಹೇಳುವಂತೆ ಅವರ ಎರಡನೆಯ ಕಾರ್ಯ, ಭಾರತೀಯ ಪ್ರಾಚೀನ ಸಂಪ್ರದಾಯದಲ್ಲಿದ್ದ ಸಾರವತ್ತಾದ ಮತ್ತು ಶಾಶ್ವತವಾದ ಅಂಶಗಳಲ್ಲಿ ಒಂದನ್ನೂ ಬಿಡದೆ, ನವಸಂನ್ಯಾಸ ಸಂಪ್ರದಾಯವೊಂದನ್ನು ಸ್ಥಾಪಿಸಿದ್ದು. ಮೂರನೆಯದು ನರನಲ್ಲಿ ನಾರಾಯಣನನ್ನು ದರ್ಶಿಸುವ ಸಾಧನೆಯ ಮಾರ್ಗವನ್ನು ಬೋಧಿಸಿ, ಸೇವಾರೂಪದ ಧರ್ಮಸಾಧನೆಯನ್ನು ಲೋಕಕ್ಕೆ ಕಲಿಸಿದುದು.

ಕುವೆಂಪು ಕನ್ನಡ ಭಾಷೆಗೆ ಸ್ವಾಮಿ ವಿವೇಕಾನಂದರ ಸಂಪೂರ್ಣ ಕೃತಿಶ್ರೇಣಿಯು ಅನುವಾದಗೊಂಡಿರುವುದಕ್ಕೆ ಸಂಭ್ರಮಿಸುತ್ತಾರೆ. ''ಸರ್ವಭಾಷಾಮಯಿಯಾದ ಭಾರತಿ ತನ್ನೆಲ್ಲ ಜಿಹ್ವೆಗಳಿಂದಲೂ ಆ ಮಹಾಪುರುಷನ ವಾಣಿಯನ್ನೂ ಕೃತಿಯನ್ನೂ ಸಂಪುಟಗೊಳಿಸಿ ಅಭಿವ್ಯಕ್ತಿ ಮಾಡುವ ಆರಾಧನೆಯನ್ನು ನೋಂತಿದ್ದಾಳೆ. ಆ ಮಹಾ ಭಾರತಿಯ ಜಿಹ್ವೆಗಳಲ್ಲಿ ಒಂದಾದ ಕನ್ನಡ ಭಾಷೆಯೂ ತನ್ನ ಕೈಂಕರ್ಯವನ್ನು ಸಲ್ಲಿಸುವುದರಲ್ಲಿ ಹಿಂದೆ ಬಿದ್ದಿಲ್ಲ.'' *(ಅಲ್ಲೇ, ಪು. xi).*


ಇದಲ್ಲದೆ ಕುವೆಂಪು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಪ್ರಕಟಣೆಯಾದ 'ಕೊಲೊಂಬೋ ಇಂದ ಆಲ್ಮೋರಕೆ' ಗ್ರಂಥಕ್ಕೂ ಮುನ್ನುಡಿಯನ್ನು ಬರೆದಿದ್ದಾರೆ. ಜನವರಿ ೨೬, ೧೮೯೭ರಂದು ಸ್ವಾಮಿ ವಿವೇಕಾನಂದರು ವಿಶ್ವವಿಜೇತನಾಗಿ ಭಾರತಭೂಮಿಯ ಸ್ಪರ್ಶ ಮಾಡಿದರು. ಈ ದಿನಾಂಕದ ಹೆಗ್ಗಳಿಕೆಯನ್ನು ಕುವೆಂಪು ಮುಕ್ತಕಂಠದಿಂದ ಕೊಂಡಾಡುತ್ತಾರೆ: ''ಅಂದಿನಿಂದ ಮೊದಲಾಯಿತು ಭರತವರ್ಷದ ಪುನರುತ್ಥಾನ. ದಕ್ಷಿಣೇಶ್ವರ ದೇವಮಾನವನ ಚಿತ್ ತಪಸ್ಸು ಸ್ವಾಮಿ ವಿವೇಕಾನಂದರ ಸಮುದ್ರ ಘೋಷ ಸ್ಪರ್ಧಿಯಾದ ವೀರವಾಣಿಯಲ್ಲಿ ವಾಙ್ಮಂತ್ರವಾಗಿ ಹೊಮ್ಮಿ, ಭಾರತೀಯರ ಧಮನಿಧಮನಿಗಳಲ್ಲಿ ಧುಮುಧುಮುಕಿ ಹರಿದು ಕ್ಲೈಬ್ಯವನ್ನು ಕೊಚ್ಚಿತು, ಧೈರ್ಯಧ್ವಜವನ್ನೆತ್ತಿತು.'' *(ಯುಗದರ್ಶನ, ಪುಟ ೬೮)*

ಸ್ವಾಮಿ ಸೋಮನಾಥಾನಂದರು ಬರೆದ 'ಶ್ರೀಶಾರದಾದೇವಿ' ಪುಸ್ತಕಕ್ಕೆ ಕುವೆಂಪು ಸುಂದರವಾದ ಮುನ್ನುಡಿಯನ್ನು ಬರೆದು ಕೊಟ್ಟಿದ್ದಾರೆ. ಅದರಲ್ಲಿ ಶ್ರೀಮಾತೆಯವರ ವ್ಯಕ್ತಿತ್ವದ ಬಗ್ಗೆ ಈ ಸುಮನೋಹರ ಮಾತುಗಳನ್ನು ಬರೆದಿದ್ದಾರೆ: ''ಶ್ರೀಮಾತೆಯವರ ಬದುಕು ದೂರದ ವೀಣಾಧ್ವನಿಯಂತೆ ಸುಮಧುರ. ಸುಪ್ರಶಾಂತ, ಕಿವಿಗೊಟ್ಟು ಆಲಿಸಿದಲ್ಲದೆ ಕೇಳುವುದೂ ಅಸಂಭವ; ಮನಮುಟ್ಟಿ ಕೇಳಿದಲ್ಲದೆ ಅದರ ಇಂಪು ಅನುಭವಕ್ಕೆ ಬರುವುದಿಲ್ಲ... ಸಾಹಸಪೂರ್ಣವಾದುದಾದರೂ ನೀರಸ ಸಾಮಾನ್ಯ; ಶ್ರದ್ಧಾಮಹಿಮೆಯಿಂದ ಧೀರವಾದರೂ ಕೌಟುಂಬಿಕ ಕಷ್ಟಕ್ಲೇಶಗಳಿಂದ ದುಃಖಪೂರ್ಣ; ಶತಶತ ಅಪಮಾನ ಅನ್ಯಾಯಗಳಿಂದ ತಾಡಿತವಾದರೂ ಸರ್ವದಾ ಕ್ಷಮಾಶೀಲ; ಆದಿಶಕ್ತಿಯ ಸರ್ವಶಕ್ತವಾದ ಬೆಂಬಲವಿದ್ದರೂ ಅಬಲೆಯಂತೆ ವ್ಯವಹರಿಸುವ ಸಹಿಷ್ಣು'' *('ಶ್ರೀಶಾರದಾದೇವಿ', ಪುಟ, ೫–೬)*

ಸ್ವಾಮಿ ಸೋಮನಾಥಾನಂದರ 'ಹಿಮಾಲಯ ಯಾತ್ರೆ' ಎಂಬ ಪ್ರವಾಸಕಥನಕ್ಕೂ ಕುವೆಂಪು ಚೇತೋಹಾರಿಯಾದ ಮುನ್ನುಡಿಯನ್ನು ರಚಿಸಿದ್ದಾರೆ. (ಹಿಂದೆ ಈ ಪುಸ್ತಕಕ್ಕೆ 'ಹೈಮಾಚಲ ಸಾನ್ನಿಧ್ಯದಲ್ಲಿ' ಎಂಬ ಕಾವ್ಯಮಯ ಶೀರ್ಷಿಕೆಯಿತ್ತು ; ಈ ಹೆಸರನ್ನು ನೀಡಿದವರೂ ಕುವೆಂಪು ಅವರೇ.) ತೀರ್ಥಯಾತ್ರೆಯ ಮಹತ್ವ, ಐತಿಹ್ಯಗಳನ್ನು ತಮ್ಮದೇ ಆದ ವೈಚಾರಿಕ ದೃಷ್ಟಿಕೋನದಿಂದ ಚರ್ಚಿಸುವ ಕುವೆಂಪು, ಸೋಮನಾಥಾನಂದಜಿ ಅವರ ಭಾಷಾಶೈಲಿಯನ್ನು ಪುಸ್ತಕದ ಹಲವಾರು ವಾಕ್ಯಗಳನ್ನು ಉದ್ಧರಿಸುವ ಮೂಲಕ ಮುಕ್ತಕಂಠದಿಂದ ಪ್ರಶಂಸಿಸುತ್ತಾರೆ.

### ಅವಿಸ್ಮರಣೀಯ ಅನುವಾದಗಳು

ಕವಿಕುಲಪುಂಗವರಾದ ಕುವೆಂಪು ಸೃಜನಾತ್ಮಕ ಬರವಣಿಗೆಯಲ್ಲಿ ಎಷ್ಟು ಸಿದ್ಧಹಸ್ತರೋ ಹಾಗೆಯೇ ಸ್ನಿಗ್ಧ ಓಜಸ್ವೀ ಕನ್ನಡ ಭಾಷೆಯಲ್ಲಿ ಅನುವಾದಗಳನ್ನು ಗೈಯುವುದರಲ್ಲಿಯೂ ಪ್ರಬುದ್ಧರು. ರಾಮಕೃಷ್ಣ-ವಿವೇಕಾನಂದ ಸಾಹಿತ್ಯದಲ್ಲಿಯೇ ಅವರು ಅನುವಾದ ಮಾಡಿದ ಅವರ ಗುರುಗಳಾದ ಪೂಜ್ಯ ಸ್ವಾಮಿ ಶಿವಾನಂದಜಿ ಮಹಾರಾಜರ ಸಂಭಾಷಣೆಯ ಗ್ರಂಥವು ಅನನ್ಯ ಸ್ಥಾನವನ್ನು ಪಡೆದುಕೊಂಡಿದೆ. '**ಗುರುವಿನೊಡನೆ ದೇವರಡಿಗೆ**' ಎಂಬ ವಿಶಿಷ್ಟ ನಾಮಧೇಯವನ್ನು ಹೊಂದಿರುವ ಈ ಗ್ರಂಥದ ಮೌಲ್ಯ ಅಪಾರ. ಇದಕ್ಕೆ ಕುವೆಂಪು ಮುನ್ನುಡಿಯನ್ನೂ ಬರೆದು ಇದರ ಮೆರುಗನ್ನು ಹೆಚ್ಚಿಸಿದ್ದಾರೆ.




'ಚರಣವೇ ಶಾಂತಿಧಾಮ: ಶರಣನೆ ದುಃಖದೂರ' ಎಂಬ ಶೀರ್ಷಿಕೆಯ ಅಡಿಯಲ್ಲಿ ಅವರು ಸ್ವಾಮಿ ಶಿವಾನಂದಜಿ ಅವರ ಮಾನಸಿಕ ಸ್ಥಿತಿಯನ್ನು ಅನುವಾದಿಸಿರುವುದು ಹೀಗೆ : ''.. ಕೆಲವು ದಿನಗಳಿಂದ ಅವರ ಮೈಸರಿಯಿಲ್ಲ... ಸರಿಯಾಗಿ ಮಾತನಾಡುವುದಕ್ಕೂ ಕಷ್ಟವಾಗುತ್ತಿತ್ತು. ಆದರೆ ಜನರ ಹೃದಯ ವ್ಯಾಕುಲತೆಯನ್ನೂ ಕಷ್ಟದುಃಖಗಳನ್ನೂ ನೋಡಿದಾಗ ಅವರ ಪ್ರಾಣವೆ ಕಣ್ಣೀರಿಡುತ್ತಿತ್ತು. ಅಂತಹ ಸಮಯಗಳಲ್ಲಿ ಅವರ ಭಾವಸ್ಥಿರತೆ ತಪ್ಪಿ ಅಲ್ಲೋಲಕಲ್ಲೋಲವಾಗಿಬಿಡುತ್ತಿತ್ತು. ದುಃಖಿಗಳ ಜೀವಕ್ಕೆ ಸಾಂತ್ವನ ಶಾಂತಿಗಳನ್ನು ನೀಡುವ ಸಲುವಾಗಿ ತಮ್ಮ ಒಡಲಿನ ಬೇನೆಯನ್ನೆಲ್ಲ ಮರೆತುಬಿಡುತ್ತಿದ್ದರು.'' *(ಪುಟ ೧೪೪)*

ಸ್ವಾಮಿ ಶಿವಾನಂದಜಿ ಅವರ ಉಕ್ತಿಗಳೂ ಕುವೆಂಪು ಅವರ ಭಾಷೆಯಲ್ಲಿ ಕನ್ನಡದಲ್ಲಿ ಹೊಸ ಜೀವಕಳೆಯನ್ನು ಪಡೆದುಕೊಳ್ಳುತ್ತವೆ. ಒಮ್ಮೆ ಸ್ವಾಮಿ ಶಿವಾನಂದಜಿ ಹೀಗೆ ಹೇಳುತ್ತಾರೆ: ''ಶ್ರೀ ಗುರುಮಹಾರಾಜರೇ ಜೀವಂತ ಆದರ್ಶವಾಗಿದ್ದಾರೆ. ನಾವು ಇಲ್ಲಿದ್ದೇವೆ ನಿಜ. ದೇಹನಾಶದ ಜೊತೆಯಲ್ಲಿಯೇ ಎಲ್ಲ ಕೊನೆಗೊಂಡು ಬಿಡುತ್ತದೇನು? ಸಾಧನೆ ಭಜನೆಯ ಮೂಲಕ ಮನಸ್ಸು ಸಂಸ್ಕೃತವಾದಾಗ ಅಂತಹ ಮನಸ್ಸಿನಲ್ಲಿ ಭಗವಂತನ ದಿವ್ಯ ಮತ್ತು ಜೀವಂತ ಆವಿರ್ಭೂತಿಯಾಗುತ್ತದೆ. ಅಂತಹ ಅನುಭೂತಿಯೆ

ನಿಜವಾದ ಅನುಭೂತಿ; ಅದರ ಪ್ರಭಾವ ಸಮಗ್ರ ಜೀವನ ವ್ಯಾಪಿಯಾಗಿ ಪರಿಣಮಿಸುತ್ತದೆ. '' *(ಪುಟ ೨೪೯)*

ಮೇಲಿನ ಗ್ರಂಥವಲ್ಲದೆ, ಕುವೆಂಪು ಸ್ವಾಮಿ ಅಪೂರ್ವಾನಂದರ 'ಮಹಾಪುರುಷ ಸ್ವಾಮಿ ಶಿವಾನಂದರು' ಎಂಬ ಲೇಖನವನ್ನು ಭಾಷಾಂತರಿಸಿದ್ದಾರೆ. ಅದರ ಒಂದು ಹೊನಲನ್ನು ನೋಡಿ: ''ಜಾತಿ, ವರ್ಣ, ಮತ, ಜನಾಂಗ ಭೇದವಿಲ್ಲದೆ ಮಾನವ ಕುಲವನ್ನೇ ಉದ್ಧಾರ ಮಾಡಲೆಂದು ಅತೀತ ಸ್ವರ್ಗದಿಂದ ಅವನತ ಪೃಥ್ವಿಗೆ ಶ್ರೀರಾಮಕೃಷ್ಣರು ಎಳೆತಂದ ಅಧ್ಯಾತ್ಮ ಭಾಗೀರಥಿಯು ಅವರ ಶಿಷ್ಯಪಾತ್ರಗಳ ಮುಖಾಂತರ ಯಥೇಚ್ಛವಾಗಿ ಪ್ರವಹಿಸಿದಳು.'' *(ಯುಗದರ್ಶನ, ೮೨)*

ಹಾಗೂ ಕುವೆಂಪು ಸ್ವಾಮಿ ವಿವೇಕಾನಂದರ ಪ್ರಸಿದ್ಧ 'ಹಿಂದೂ ಧರ್ಮ ಮತ್ತು ಶ್ರೀರಾಮಕೃಷ್ಣ' ಲೇಖನವನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಇಲ್ಲಿಯೂ ಕೂಡ ಕುವೆಂಪು ಅವರ ಓಜಸ್ವೀ ಭಾಷೆಯ ಮುಕ್ತ ಪ್ರವಾಹವನ್ನು ಕಾಣಬಹುದು. ಒಂದು ಕಡೆ ಅವರು ಹೀಗೆ ಅನುವಾದ ಮಾಡಿದ್ದಾರೆ: ''... ಆದ್ದರಿಂದ ಈ ನವಜಾಗ್ರತಿಯ, ಈ ನವಚೈತನ್ಯದ, ಈ ಹೊಸ ಹುರುಪಿನ ಸಮುಜ್ವಲ ಜ್ಯೋತಿಯ ಮುಂದೆ ಪೂರ್ವಪೂರ್ವಯುಗಗಳ ಪ್ರಬೋಧನ ಸಮೂಹಗಳು ಸೂರ್ಯಾಲೋಕದಲ್ಲಿರುವ ತಾರಾವಳಿಗಳಂತೆ ಮಹಿಮಾವಿಹೀನವಾಗಿಬಿಡುವುವು. '' *(ಯುಗದರ್ಶನ, ೧೪೫)*

ಇದಲ್ಲದೆ ಸ್ವಾಮಿ ಘನಾನಂದರ ಮೂಲ ಇಂಗ್ಲಿಷ್ ಬರಹವನ್ನು 'ಶ್ರೀರಾಮಕೃಷ್ಣರ ಕುರಿತು ಟಾಯನ್‌ಬಿ' ಎಂಬ ಹೆಸರಿನಲ್ಲಿ ಕುವೆಂಪು ಭಾಷಾಂತರಿಸಿದ್ದಾರೆ.

## ಸ್ವತಂತ್ರ ಬರಹಗಳು

ಕುವೆಂಪು ಅವರ ವೈಚಾರಿಕ ಲೇಖನಗಳ ಸಂಕಲನಗಳಲ್ಲಿ ರಾಮಕೃಷ್ಣ-ವಿವೇಕಾನಂದ ತಾತ್ತ್ವಿಕತೆಯ ಹಲವು ಬರಹಗಳು ಅಡಕವಾಗಿವೆ. ಅವುಗಳನ್ನು ಡಾ. ಹೆಚ್. ಎನ್. ಮುರಳೀಧರ ಅವರು **'ಯುಗದರ್ಶನ'** ಎಂಬ ಪುಸ್ತಕದಲ್ಲಿ ಸಂಗ್ರಹಿಸಿದ್ದಾರೆ. ಅವುಗಳಲ್ಲಿ ಕೆಲವು ಹೀಗಿವೆ: ಶ್ರೀರಾಮಕೃಷ್ಣ ಲೀಲಾಪ್ರಸಂಗ (ಷಷ್ಟಿನಮನ ಗ್ರಂಥ), ಪರಮಹಂಸರ ವಚನಾಮೃತದಲ್ಲಿ ದೃಷ್ಟಾಂತ ಕಥಾವಿಧಾನ (ಷಷ್ಟಿನಮನ), ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ (ವಿಭೂತಿ ಪೂಜೆ), ಕರೆಯುತಿದೆ ಯುಗವಾಣಿ (ಷಷ್ಟಿನಮನ) ಮತ್ತು ದೀಕ್ಷಾಯಾತ್ರೆ (ಷಷ್ಟಿನಮನ).

ಮೇಲಿನ ಬರಹಗಳಲ್ಲಿನ ವಿಶಿಷ್ಟ ವಿಶ್ಲೇಷಣಾ ವಿಧಾನಕ್ಕೆ ಕೆಲವು ದೃಷ್ಟಾಂತಗಳನ್ನು ನೀಡಬಹುದು. ಶ್ರೀರಾಮಕೃಷ್ಣ ಲೀಲಾಪ್ರಸಂಗದ ಬಗೆಗಿನ ಲೇಖನದಲ್ಲಿ ಕುವೆಂಪು ಬರೆಯುತ್ತಾರೆ: ''ಶ್ರೀರಾಮಕೃಷ್ಣ ವಚನವೇದ ಮತ್ತು ಶ್ರೀರಾಮಕೃಷ್ಣ ಲೀಲಾಪ್ರಸಂಗ ಇವೆರಡೂ ಬೃಹದ್ ಗ್ರಂಥಗಳು ಒಂದಕ್ಕೊಂದು ಪೂರಕವಾಗಿ, ಶ್ರೀಗುರುವಿನ ಮಹಾದ್ಭುತ ಜೀವನಸಾಗರಕ್ಕೆ ಭೂವ್ಯೋಮ ಸದೃಶವಾದ ವಿಸ್ತಾರವೇದಿಕೆಯನ್ನು ನಿರ್ಮಿಸಿವೆ. ಆ ಪವಿತ್ರವೇದಿಕೆಯನ್ನು ಪ್ರವೇಶಿಸುವ ಚೇತನಕ್ಕೆ ಬಡತನವುಂಟೆ? ಭಯವುಂಟೆ? ಅದರ ಪುಣ್ಯಕ್ಕೆ ಎಣೆಯುಂಟೆ? ಅದರ ಧನ್ಯತೆಗೆ ಪಾರವುಂಟೆ? ಪೀಯೂಷ ಪಾನ ಮಾಡುತ್ತಾ ಮಾತೆಯ ಮಡಿಲಲ್ಲಿ ಮಲಗುವ ಮಗುವಾಗುತ್ತೇವೆ; ಭಕ್ತಿಯೆ ಹೃದಯವಾಗಿ, ಜ್ಞಾನವೆ ಶ್ವಾಸಕೋಶವಾಗಿ, ಅಮೃತತ್ತ್ವದ ಔರಸ ಅಧಿಕಾರೀ ಪುತ್ರರಾಗುತ್ತೇವೆ!''

'ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ' ಲೇಖನವು ಒಂದು ದೀರ್ಘವಾದ ವಿಶ್ಲೇಷಣಾತ್ಮಕ ಬರಹ. ಅದರಲ್ಲಿ ಮೂರು ಭಾಗಗಳಿವೆ. ಮೊದಲನೆಯದು ವ್ಯಷ್ಟಿಸಿದ್ಧಿ. ಎರಡನೆಯದು ಸಮಷ್ಟಿಸಿದ್ಧಿಗಾಗಿ ಮತ್ತು ಮೂರನೆಯದು ದೃಷ್ಟಿಯಂತೆ ಸೃಷ್ಟಿ. ಕುವೆಂಪು ಅವರೇ ಹೇಳಿಕೊಳ್ಳುವಂತೆ, ಮೊದಲನೆಯದರಲ್ಲಿ, 'ನರೇಂದ್ರನು ವಿವೇಕಾನಂದರಾದದ್ದು ಹೇಗೆ? ವ್ಯಕ್ತಿಜೀವನ ದೃಷ್ಟಿಯಿಂದ ಅದರ ಅರ್ಥವೇನು? ಮಹಿಮೆಯೇನು? ಪ್ರಯೋಜನವೇನು?' ಎಂಬುದರ ವ್ಯಾಖ್ಯಾನವಿದೆ. ಎರಡನೆಯದರಲ್ಲಿ, 'ವಿವೇಕಾನಂದರು ಅಮೆರಿಕಾಕ್ಕೆ ಹೋದದ್ದು ಏಕೆ? ಪ್ರಪಂಚಜೀವನ ದೃಷ್ಟಿಯಿಂದ ಅದಕ್ಕೆ ಅರ್ಥವೇನು? ಅದರ ಬೆಲೆಯೇನು? ಅದರಿಂದ ಪ್ರಯೋಜನವೇನು?' ಇವುಗಳ ವಿಶ್ಲೇಷಣೆಯಿದೆ. ಮೂರನೆಯದರಲ್ಲಿ, 'ಅಂತಹ ಜಿಜ್ಞಾಸೆಯಿಂದ, ಅಂತಹ ಪರಿಶೀಲನೆಯಿಂದ ನಮ್ಮಲ್ಲಿ ಎಂತಹ ದೃಷ್ಟಿ ಮೂಡುತ್ತದೆ. ವ್ಯಷ್ಟಿಯಲ್ಲಿ ಹಾಗೆ ಸಿದ್ಧವಾಗುವ ದೃಷ್ಟಿ ಮುಂದಣ ಜಗತ್‌ಸಮಾಜದ ಸಮಷ್ಟಿಸೃಷ್ಟಿಗೆ ಏನು ಬೆಳಕು ನೀಡುತ್ತದೆ? ಯಾವ ತಪಸ್ಸನ್ನು ಆಶಿಸುತ್ತದೆ? ಎಂಥ ಶಕ್ತಿಯನ್ನು ಆಹ್ವಾನಿಸುತ್ತದೆ? ಅಂತಹ ದಿವ್ಯದರ್ಶನದಿಂದ ದೀಪ್ತವಾಗುವ ವ್ಯಷ್ಟಿಸಿದ್ಧಿಯಿಂದ ಎಂತಹ ಸಮಷ್ಟಿಸಿದ್ಧಿ ಸಂಸ್ಥಾಪಿತವಾಗಿ ಸರ್ವೋದಯವಾಗಲು ಸಾಧ್ಯವಾಗುತ್ತದೆ?' ಎಂಬುದರ ವಿವರಣೆ ಇದೆ.

## ಕವಿತೆಗಳ ಭಾವಲಹರಿ

ಕುವೆಂಪು ಮೂಲತಃ ಭಾವಜೀವಿ. ಕವಿಹೃದಯದ ಅವರು ತಮ್ಮ ಆರಾಧ್ಯದೇವರಿಗೆ ಹತ್ತುಹಲವು ಕವಿತೆಗಳ ಭಾವಕುಸುಮಗಳನ್ನು ಅರ್ಪಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ರಾಮಕೃಷ್ಣ ಆಶ್ರಮಗಳಲ್ಲಿ ಭಕ್ತರು ಹಾಡುತ್ತಾರೆ. ತಮ್ಮ ಮನಹೃದಯಗಳನ್ನು ದಿವ್ಯತ್ರಯರ ಸ್ಮರಣೆಯಿಂದ ತುಂಬಿಕೊಳ್ಳುತ್ತಾರೆ.

**'ಶ್ರೀರಾಮಕೃಷ್ಣ ಪರಮಹಂಸ'** ಎಂಬ ಕವಿತೆಯು ಐತಿಹಾಸಿಕ ಹಿನ್ನೆಲೆಯಲ್ಲಿ ಶ್ರೀರಾಮಕೃಷ್ಣರ ಅವತಾರದ ಮಹತ್ವವನ್ನು ಎತ್ತಿಹಿಡಿಯುವುದರೊಂದಿಗೆ ಆರಂಭಗೊಳ್ಳುತ್ತದೆ : 'ಭರತಖಂಡದ ನೀಲಗಗನವ ತಿಮಿರ ಮುಸುಗಿರಲು' ಅನಂತರ ಗುರುದೇವರ ಸಾಧನ ಸಮನ್ವಯ ಮತ್ತು ಧರ್ಮ ಸಮನ್ವಯವನ್ನು ಕುವೆಂಪು ಕೆಲವೇ ಪದಗಳಲ್ಲಿ ಸಂಗ್ರಹಿಸುತ್ತಾರೆ.

ಸರ್ವಮಾರ್ಗಗಳೊಂದೆ ನಿಲಯಕೆ ಪೋಪುವೆಂಬುದನು
ಯೋಗವಿದ್ಯೆಯೊಳರಿತು ಮಾನವ ಕುಲಕೆ ಬೋಧಿಸಿದೆ

ಹೀಗೆ ಶ್ರೀರಾಮಕೃಷ್ಣರ ಜೀವನಸಿದ್ಧಿಗಳನ್ನು ಮೋಹಕವಾಗಿ ಪದ್ಯಮಾಲೆಯಲ್ಲಿ ಹೆಣೆಯುವ ಕುವೆಂಪು ಕಡೆಗೆ ಗುರುದೇವರಲ್ಲಿ ತಮ್ಮೀ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ:

ಭಾರತೀಯರಿಗಾತ್ಮಶಕ್ತಿಯ ನೀಡಿ ಕಾಪಾಡು
ಭಾರತೀಯರ ಹೃದಯವಾಗಲಿ ನಿನ್ನ ನೆಲೆವೀಡು

ಅತ್ಯಂತ ಜನಪ್ರಿಯವೂ ಹೃದಯಸ್ನಿಗ್ಧವೂ ಆದ ಎರಡು ಕವಿತೆಗಳೆಂದರೆ, 'ಬಾ ಗುರುದೇವನೆ ಬಾ' ಮತ್ತು 'ಶ್ರೀ ಶಾರದಾದೇವಿ, ಹೇ ಮಹಾಮಾತೆ'. ಮೊದಲನೆಯ ಕವಿತೆಯಲ್ಲಿ ಕವಿಯ ಹೃದಯವು ಕವಿಶೈಲವಾಗುತ್ತದೆ; ಅಲ್ಲಿ ಅವರು ಗುರುದೇವರನ್ನು ಆಹ್ವಾನಿಸುತ್ತಾರೆ. ಎರಡನೆಯ ಕವಿತೆಯಲ್ಲಿ ಶ್ರೀಮಾತೆಯವರ ವ್ಯಕ್ತಿತ್ವವು ಘನೀಭೂತವಾಗಿ ಕಾವ್ಯರಸಪ್ರತಿಮೆಯಾಗಿದೆ:

ಗಗನದಂತಿಹುದಮ್ಮ ನಿನ್ನ ಗಾಂಭೀರ್ಯ
ನಿನ್ನ ತೇಜದ ಭಾಗವೀ ನಮ್ಮ ಸೂರ್ಯ
ನಿನ್ನ ಮೂಲವು ರಾಮಕೃಷ್ಣ ಗುರುವರ್ಯ
ಮಕ್ಕಳಾಗಿಹ ನಮ್ಮ ಪೊರೆ, ಶಕ್ತಿಯಮ್ಮ

ಸ್ವಾಮಿ ವಿವೇಕಾನಂದರ ಬಗೆಗಿನ ಅವರ ನೀಳ್ಗವಿತೆಯು ಓಜಸ್ಸು, ತೇಜಸ್ಸುಗಳಿಂದ ಕೂಡಿ ನಮ್ಮನ್ನು ಕಿಚ್ಚೆಬ್ಬಿಸುತ್ತದೆ.

ಭರತಖಂಡದೊಳರಚುತಲೆಯುವ ಮನುಜಕುರಿಗಳಿಗೆ
ಸಿಂಹ ಹೃದಯವನಿತ್ತು ಗರ್ಜಿಸುವಂತೆ ನೀಮಾಡಿ,
ಕುರಿಯ ದೊಡ್ಡಿಯ ಮುರಿದು ಸಿಂಹದ ಗುಹೆಯ ವಿರಚಿಸಿದೆ;
ಸಿಂಹಹೃದಯನೆ ಶ್ರೀ ವಿವೇಕಾನಂದ ಯೋಗೀಶ

ರಾಮಕೃಷ್ಣ ಭಾವಧಾರೆಯನ್ನು ತಮ್ಮ ಕವಿತಾಗಂಗೆಯ ಮಾಧ್ಯಮದ ಮೂಲಕ ಕರ್ನಾಟಕದಾದ್ಯಂತ ಪ್ರಬಲವಾಗಿ, ಸಮರ್ಥವಾಗಿ ಹರಿಸಿ ಭಕ್ತಹೃದಯಗಳನ್ನು ಪಾವನಗೊಳಿಸಿದವರು ಕುವೆಂಪು.

## ಸರ್ವಾಂಗೀಣ ವಾಙ್ಮಯದ ಭಾವಗರ್ಭ

ಕುವೆಂಪು ಸಾಹಿತ್ಯ ಆಕಾಶದಷ್ಟು ವಿಶಾಲಪರಿಧಿಯುಳ್ಳದ್ದು; ಸಾಗರದಷ್ಟು ಗಂಭೀರಪ್ರಜ್ಞೆಯುಳ್ಳದ್ದು. ಇದರ ಸಾರತತ್ತ್ವವದು ಯಾವುದು ಎಂದು ಅವರ ಶಿಷ್ಯಪ್ರಶಿಷ್ಯ ವರ್ಗಕ್ಕೆ ಸೇರಿದ ಪಂಡಿತರು ಆಲೋಚಿಸಿದ್ದಾರೆ ಮತ್ತು ಅದರ ಬಗ್ಗೆ ಬರೆದೂ ಇದ್ದಾರೆ. ಅವರೆಲ್ಲರ ಒಮ್ಮತದ ಅಭಿಪ್ರಾಯವೆಂದರೆ, ಶ್ರೀರಾಮಕೃಷ್ಣ-ವಿವೇಕಾನಂದರ ಭಾವಗಂಗೆಯೇ ಕುವೆಂಪು ಸಾಹಿತ್ಯದ ಉದ್ದಗಲಗಳಲ್ಲಿಯೂ ಹಾಸುಹೊಕ್ಕಾಗಿ ಹರಿಯುತ್ತಿರುವುದು. ಅದು ಒಮ್ಮೆ ಗುಪ್ತಗಾಮಿನಿಯಾಗಿದ್ದರೆ, ಮತ್ತೊಮ್ಮೆ ಮೇರುಗಾಮಿನಿಯಾಗಿಯೇ ಕಾಣಿಸಿಕೊಳ್ಳುತ್ತದೆ. ಶ್ರೀರಾಮಕೃಷ್ಣ-ವಿವೇಕಾನಂದ ಭಾವಧಾರೆಯ ಪ್ರಭಾವ ಕುವೆಂಪು ಸಾಹಿತ್ಯದಲ್ಲಿ ಸರ್ವತೋಮುಖವಾಗಿದೆ. ಇದನ್ನು ವಿದ್ವಾಂಸರಾದ ಡಾ. ಜಿ.ಎಸ್. ಶಿವರುದ್ರಪ್ಪ ಮತ್ತು ಡಾ.ಎಚ್. ಎನ್. ಮುರಳೀಧರ ತಮ್ಮ ಬರಹಗಳಲ್ಲಿ ಸ್ಪಷ್ಟವಾಗಿ ಗುರುತಿಸಿದ್ದಾರೆ. ಕುವೆಂಪು ಅವರ ಮೇರುಕೃತಿಯಾದ 'ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಕೂಡ ಶ್ರೀರಾಮಕೃಷ್ಣರ ಜೀವನದ ದಟ್ಟ ಛಾಯೆಯನ್ನು ಕಾಣಬಹುದು ಎಂದು ಡಾ. ಮುರಳೀಧರ ಅವರು ಅಭಿಪ್ರಾಯಪಡುತ್ತಾರೆ.

## ಉಪಸಂಹಾರ

ಒಟ್ಟಾರೆ ಕುವೆಂಪು ಅವರ ಜೀವನ ಮತ್ತು ಕಾವ್ಯಗಳು ರಾಮಕೃಷ್ಣ ಅನುಗತವಾಗಿದ್ದವು. ಹೀಗಾಗಿ ಅವರು ರಾಮಕೃಷ್ಣ- ವಿವೇಕಾನಂದ ಸಾಹಿತ್ಯಕ್ಕೆ ನೀಡಿದ ಕೊಡುಗೆ ಹಲವಾರು ಸ್ತರಗಳಲ್ಲಿವೆ ಮತ್ತು ಎಲ್ಲ ಸ್ತರಗಳನ್ನೂ ಮೀರಿಹೋಗಿ ಅತೀಂದ್ರಿಯವಾಗಿಯೂ ಇದೆ. ಕನ್ನಡದಲ್ಲಿ ರಾಮಕೃಷ್ಣ-ವಿವೇಕಾನಂದ ಸಾಹಿತ್ಯವು ಶೈಶವಾವಸ್ಥೆಯಲ್ಲಿದ್ದಾಗ, ಅದಕ್ಕೆ ನೀರುಣಿಸಿ ಪೋಷಿಸಿದ ಮಹನೀಯರಲ್ಲಿ ಕುವೆಂಪು ಅವರು ಕೂಡ ಒಬ್ಬರು. ಆ ಮೂಲಕ ಕರ್ನಾಟಕದ ರಾಮಕೃಷ್ಣ ಆಂದೋಲನಕ್ಕೆ ಅವರ ಕೊಡುಗೆ ಅಪಾರ. ಇದಲ್ಲದೆ, ಅವರ ವ್ಯಕ್ತಿತ್ವವು ರಾಮಕೃಷ್ಣ-ವಿವೇಕಾನಂದಮಯವಾಗಿತ್ತು. ಅವರ ವೈಚಾರಿಕತೆಯು ಸ್ವಾಮಿ ವಿವೇಕಾನಂದರಿಂದ ಪ್ರಭಾವಿತಗೊಂಡಿದ್ದರೆ, ಆಧ್ಯಾತ್ಮಿಕ ಭಾವುಕತೆಯು ಶ್ರೀರಾಮಕೃಷ್ಣ ಚಿಂತನೆಯ ನೆರಳಾಗಿತ್ತು. ಕುವೆಂಪು ರಾಮಕೃಷ್ಣಮಯರಾಗಿ ಬದುಕಿದರು; ಅದರ ಕಂಪನ್ನು ತಮ್ಮ ಸಾಹಿತ್ಯದ ಮೂಲಕ ಮಿಕ್ಕವರಿಗೂ ಪಸರಿಸಿದರು. ಇದು ಕನ್ನಡ ಸಾಹಿತ್ಯ ಇತಿಹಾಸದಲ್ಲಿ ನಡೆದ ಒಂದು ಮಹತ್ವದ ಘಟನೆ. ✽

## ಸ್ವಾಮೀಜಿ ಮತ್ತು ಭಾರತ

ಸ್ವಾಮಿ ವಿವೇಕಾನಂದರು ಹಿಂದೂಧರ್ಮವನ್ನು ರಕ್ಷಿಸಿದರು, ಹಾಗೂ ಭಾರತವನ್ನು ರಕ್ಷಿಸಿದರು. ಅವರಿಲ್ಲದಿದ್ದರೆ ನಾವು ನಮ್ಮ ಧರ್ಮವನ್ನು ಕಳೆದುಕೊಳ್ಳುತ್ತಿದ್ದೆವು, ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿದ್ದೆವು. ಆದ್ದರಿಂದ ನಾವು ಸ್ವಾಮಿ ವಿವೇಕಾನಂದರಿಗೆ ಎಲ್ಲ ವಿಷಯಗಳಲ್ಲೂ ಋಣಿಗಳಾಗಿರುವೆವು. ಅವರ ವಿಶ್ವಾಸ, ಧೈರ್ಯ ಹಾಗೂ ವಿವೇಕ ನಮಗೆ ನಿರಂತರ ಪ್ರೇರಣೆ ನೀಡಲಿ. ಅದರಿಂದ ನಾವು ಅವರು ನಮಗಿತ್ತ ದಿವ್ಯನಿಧಿಯನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವಂತಾಗಲಿ!

— ಚಕ್ರವರ್ತಿ ರಾಜಗೋಪಾಲಾಚಾರಿ